ಬೆಳಗಾವಿ ಜಿಲ್ಲೆಯ ಮಾರ್ಕಂಡೆಯ ಯೋಜನೆಯಡಿಯಲ್ಲಿ ಮುಳುಗಡೆಯಾಗಲಿರುವ ಹಳ್ಳಿಗಳನ್ನು ಸ್ಥಳಾಂತರಿಸುವುದು.

268 (503) ಶ್ರೀ ನಾಯಕ್ ಚಂದ್ರಶೇಖರ್ ಸದಾಶಿವ (ಗೋಕಾಕ್) : ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲಾ ಮಾರ್ಕಂಡೇಯ ಯೋಜನೆಯಡಿ ಮುಳುಗಡೆ ಆಗುತ್ತಿರುವ ಹಳ್ಳಿಗಳ ಸಂಖ್ಯೆ ಎಷ್ಟು? (ಅವುಗಳ ಪಟ್ಟಿ ಕೊಡುವುದು).

ಆ) ಸದರಿ ಯೋಜನೆಯಡಿ ಮುಳುಗಡೆಯಾಗುತ್ತಿರುವ ಸಾಗುವಳಿ ಜಮೀನಿನ ಪ್ರಮಾಣವೆಷ್ಟು;

ಇ) ಮುಳುಗಡೆ ಪ್ರದೇಶದ ಜನರಿಗೆ ಪರಿಹಾರ ನೀಡುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಈ) ಪರಿಹಾರ ಸಂದಾಯ ಮಾಡಲು ಬೇಕಾದ ಅವಧಿ ಎಷ್ಟು?

ಉ) ಮುಳುಗಡೆ ಪ್ರದೇಶದ ಜನರನ್ನು ಸ್ಥಳಾಂತರಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :

ಅ) 9 ಹಳ್ಳಿಗಳು ಮಾರ್ಕಂಡೇಯ ಯೋಜನೆಯಡಿಯಲ್ಲಿ ಮುಳುಗಡೆಯಾಗುತ್ತಿದೆ.

ಗ್ರಾಮಗಳು :-

1) ಗುತ್ತೆ	2) ನಂದಿ
3) ಕೆಂಚನಟ್ಟಿ	4) ಮಾವಿನಹೊಳಿ
5) ಬೈಲೂರ	6) ಪಾರಿಹೊಳಿ
7) ರಂಗಧೋಳಿ	8) ರಂಗನಹಳ್ಳಿ ಹಾಗೂ
9) ಲಿಂಗನಹಟ್ಟಿ.	

ಆ) 926 ಹೆಕ್ಟೇರ್

ಇ) ಈ ವಿಷಯವು ಪುನರ್ವಸತಿ ಸಮಿತಿಯಿಂದ ನಿರ್ಧರಿಸಬೇಕಾಗಿದ್ದು ಕಾಲಾನುಕ್ರಮಕ್ಕೆ ಪರಿಹಾರ ಧನ ನೀಡಲುಕಾರ್ಯಕ್ರಮವನ್ನು ರೂಪಿಸಲಾಗುವುದು.

ಈ) ಸುಮಾರು ಎರಡು ವರ್ಷಗಳ ಕಾಲ ಬೇಕಾಗುತ್ತದೆ.

ಉ) ಕೆಲಸಗಳು ಪ್ರಾರಂಭಿಕ ಹಂತದಲ್ಲಿರುವುದರಿಂದ ಮುಳುಗಡೆ ಪ್ರದೇಶದ ಜನರನ್ನು ಪ್ರಗತಿಯ ಅನುಸಾರ ಮತ್ತು ಪುನರ್ವಸತಿ ಸಮಿತಿಯ ನಿರ್ಧಾರದಂತೆ ಸ್ಥಳಾಂತರಿಸಲಾಗುವುದು.

ರಾಜ್ಯದಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ನೀಡುವುದು.

271(65) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ತಾಲ್ಲೂಕಿಗೆ ಪ್ರತಿ ವರ್ಷ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ನೀಡಲು ಗುರಿಯನ್ನು ನಿಗಧಿಪಡಿಸಲಾಗಿದೆಯೇ; ತಾಲ್ಲೂಕುವಾರು ವಿವರ ನೀಡುವುದು.

ಆ) ಹಾಗಿದ್ದಲ್ಲಿ 1996-97, 1997-98 ಹಾಗೂ 1998-99ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿ ಎಷ್ಟು;

ಇ) ನಿಗಧಿಪಡಿಸಿರುವ ಗುರಿಯಲ್ಲಿ ಈ 3 ಸಾಲುಗಳಲ್ಲಿ ರೈತರು ತಮ್ಮ ಸ್ವಂತ ಖರ್ಚಿನಲ್ಲಿ ವಿದ್ಯುಚ್ಛಕ್ತಿ ಪಡೆದವರ ಸಂಖ್ಯೆ ಎಷ್ಟು ಮತ್ತು ಉಳಿದವರ ಸಂಖ್ಯೆ ಎಷ್ಟು ; ತಾಲ್ಲೂಕುವಾರು ವಿವರ ನೀಡುವುದು;

ಈ) ಸ್ವಂತ ಖರ್ಚಿನಲ್ಲಿ ವಿದ್ಯುಚ್ಛಕ್ತಿ ಪಡೆಯುವ ಆದ್ಯತೆ ನೀಡುತ್ತಿರುವುದರಿಂದ ಉಳಿದ ರೈತರಿಗೆ ತೊಂದರೆಯಾಗುತ್ತಿ ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಮತ್ತು ಆ) ಹೌದು. 1996-97, 1997-98ಮತ್ತು 1998-99ನೇ ಸಾಲುಗಳಲ್ಲಿ ರಾಜ್ಯದ ಪ್ರತಿ ತಾಲ್ಲೂಕಿಗೆ ನಿಗಧಿಪಡಿಸಲಾದ ಗುರಿ ಮತ್ತು ಸಾಧನೆಯ ವಿವರಗಳನ್ನು ಅನುಬಂಧ 'ಅ'ದಲ್ಲಿ ಒದಗಿಸಲಾಗಿದೆ.

ಇ) 1996-99, 1997-98 ಹಾಗೂ 1998-99ರ ಸಾಲುಗಳಲ್ಲಿ ರೈತರು ತಮ್ಮ ಸ್ವಂತ ಖರ್ಚಿನಲ್ಲಿ(ಸ್ವಯಂ ಆರ್ಥಿಕ ನೆರವು ಯೋಜನೆ) ವಿದ್ಯುತ್ ಸಂಪರ್ಕ ಪಡೆದವರ ಸಂಖ್ಯೆಮತ್ತು ಉಳಿದ ಇತರ ಯೋಜನೆಗಳಡಿಯಲ್ಲಿ ವಿದ್ಯುತ್‌ಸಂಪರ್ಕ ಪಡೆದವರ ಸಂಖ್ಯೆಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧ 'ಆ'ದಲ್ಲಿ ಒದಗಿಸಿದೆ.

ಈ) ಮಂಡಳಿಯ ಆರ್ಥಿಕ ಮುಗ್ಗಟ್ಟು ಪರಿಸ್ಥಿತಿಯಿಂದಾಗಿ, ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕೋರಿ ಬಂದಎಲ್ಲಾರುವುದುಅರ್ಜಿದಾರಿಗೆ ಒಂದೇ ಬಾರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸಾಧ್ಯವಿಲ್ಲ. ಆದ್ಯತಾಪಟ್ಟಿಯಲ್ಲಿ ಜೇಷ್ಠತೆಯ ಪ್ರಕಾರ ವಿದ್ಯುತ್ ಸಂಪರ್ಕ ಕಲ್ಪಿಸುವುದು ಅನಿವಾರ್ಯವಾಗಿರುತ್ತದೆ. ಆದರೆ, ರಾಜ್ಯದ ಹಿತದೃಷ್ಟಿಯಿಂದಮತ್ತು ರೈತರಿಗೆಕೃಷಿ ಉತ್ಪಾದನೆಮಾಡಲು ಅನುಕೂಲಮಾಡಿ ಕೊಡುವ ಉದ್ದೇಶದಿಂದತಮ್ಮ ಸ್ವಂತ ಖರ್ಚಿನಲ್ಲಿಯೇವಿದ್ಯುತ್ ಸಂಪರ್ಕ ಪಡೆಯಲು ಮುಂದೆ ಬಂದಂತಹ ರೈತರಿಗೆ ಆದ್ಯತೆ ಕೊಟ್ಟು 'ಸ್ವಯಂ ಆರ್ಥಿಕ ನೆರವು' ಯೋಜನೆ ಯಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು, ಇದು ಅರ್ಜಿದಾರರಿಗೆ ಐಚ್ಛಿಕವಾಗಿದ್ದು, ಮಂಡಳಿಯ ಒತ್ತಾಯ ಇರುವುದಿಲ್ಲ.

ಉ) ಸ್ವಯಂ ಆರ್ಥಿಕ ನೆರವು ಯೋಜನೆಯ ಸಂಪೂರ್ಣವಾಗಿ ಐಚ್ಛಿಕವಾಗಿದ್ದು, ಸಾಮಾನ್ಯ ಕಾರ್ಯಕ್ರಮದಡಿಯ ಅರ್ಜಿದಾರರಿಗೆ ಆದ್ಯತಾ ಪಟ್ಟಿಯಲ್ಲಿನ ಜೇಷ್ಠತೆ ಪ್ರಕಾರ ವಿದ್ಯುತ್ ಸಂಪರ್ಕ ಪೂರೈಸಲು ಕ್ರಮತೆಗೆದು ಕೊಳ್ಳುವುದರಿಂದ ಇದು ಉದ್ಭವಿಸುವುದಿಲ್ಲ.